**ಪಿ.ಡಬ್ಲ್ಯು-02 – ಚಿನ್ನಸ್ವಾಮಿ**

**<u>ಸಾಕ್ಷಿಯನ್ನು ದಿನಾಂಕಃ 26.09.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಬಿ.ಎಸ್.ಎಸ್. ವಕೀಲರಿಂದಃ</u>**

ನಾನು ನನ್ನ ಮುಖ್ಯ ವಿಚಾರಣೆಯ ಬದಲಾಗಿ ಸಲ್ಲಿಸಿದ ಪ್ರಮಾಣ ಪತ್ರದಲ್ಲಿರುವ ಅಂಶಗಳ ಬಗ್ಗೆ ನನಗೆ ಗೊತ್ತಿರುತ್ತದೆ. ವಾದಿ ಹೂಡಿರುವ ಈ ದಾವೆಯ ದಾವಾ ಆಸ್ತಿ ಸಂಖ್ಯೆ ನನಗೆ ಗೊತ್ತಿರುವುದಿಲ್ಲ. ಸದರಿ ಆಸ್ತಿಯ ವಿಸ್ತೀರ್ಣ ಪೂರ್ವ-ಪಶ್ಚಿಮಃ 10.66 ಮೀಟರ್ ಮತ್ತು ಉತ್ತರ-ದಕ್ಷಿಣಃ 12.192 ಮೀಟರ್ ಇರುತ್ತದೆ. ವಾದಿಯ ಜೊತೆ ಉಪ-ನೋಂದಾವಣಿ ಕಛೇರಿಗೆ ನಾನು ಸಾಕ್ಷಿಯಾಗಿ ಹೋದಾಗ ದಾಖಲೆಗಳನ್ನು ನೋಡಿರುತ್ತೇನೆ. ನಾನು ಕ್ರಯ ಪತ್ರದಲ್ಲಿರುವ ವಿಚಾರಗಳ ಜೊತೆಗೆ ಸದರಿ ಆಸ್ತಿಯನ್ನು ಖುದ್ದಾಗಿಯೂ ಸಹ ನೋಡಿರುತ್ತೇನೆ. ಸದರಿ ಕ್ರಯ ಪತ್ರವನ್ನು ದಿನಾಂಕಃ 17.05.2022 ರಂದು ನೋಂದಾಯಿಸಲಾಯಿತು. ಸದರಿ ಕ್ರಯ ಪತ್ರವನ್ನು ಮಾಸ್ತಯ್ಯ ಎನ್ನುವವರು ಬರೆದಿರುತ್ತಾರೆ. ನಾನು ತಿಳಿಸಿರುವಂತೆ ಕ್ರಯ ಪತ್ರ ದಿನಾಂಕಃ 17.05.2022 ರಂದು ನೋಂದಾವಣೆಯಾಗಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ದೇವಮಣಿಯವರು ವಾದಿಗೆ ತೊಂದರೆ ಕೊಟ್ಟಿರುತ್ತಾರೆ. ದಿನಾಂಕಃ 17.08.2023 ರಂದು ಆ ರೀತಿ ಪ್ರತಿವಾದಿ ವಾದಿಯ ದಾವಾ ಆಸ್ತಿಗೆ ತೊಂದರೆ ಮಾಡಿರುತ್ತಾರೆ. ಸದರಿ ದಿನದಂದು ಪ್ರತಿವಾದಿ ವಾದಿಗೆ ಆ ರೀತಿ ಯಾವುದೇ ತೊಂದರೆ ಕೊಟ್ಟಿರುವುದಿಲ್ಲ, ಬದಲಾಗಿ ವಾದಿಯ ಮಾತನ್ನು ಕೇಳಿಕೊಂಡು ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಕ್ರಯ ಪತ್ರಕ್ಕೆ ಸಹಿಯನ್ನು ಮಾಡಿದ್ದರ ಹೊರತಾಗಿ ನನಗೆ ದಾವಾ ಆಸ್ತಿಯ ಬಗ್ಗೆ ಬೇರ್ಯಾವ ವಿಚಾರ ಗೊತ್ತಿರುವುದಿಲ್ಲ, ಬದಲಾಗಿ ವಾದಿಯ ಮಾತನ್ನು ಕೇಳಿಕೊಂಡು ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ನ್ಯಾಯಾಲಯಕ್ಕೆ ಬಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ.</u>**

(**ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)

**ಓ ಹೇ ಕೇ ಸಾ ಸ ಇ ಒ.,**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ಹೆಗ್ಗಡದೇವನಕೋಟೆ.**